

# ತಿಪ್ಪೆ ಕೆದರುವ ಕೋಳಿ

ಹದ್ದೊಂದು ಬಂದು, ತಿಪ್ಪೆ ಕೆದರುತ್ತಿದ್ದ ಕೋಳಿಮರಿಗಳ ಗುಂಪಿನಿಂದ ಒಂದು ಮರಿಯನ್ನು ಹಿಡಿದುಕೊಂಡು ಹೋಯಿತು. ಅಜ್ಜಿ, ಈ ಕೋಳಿಗಳು ತಿಪ್ಪೆಯನ್ನು ಏಕೆ ಕೆದರಲು ಹೋಗಬೇಕು? ಆಗೆಲ್ಲಾ ಹದ್ದು ಬಂದು ಒಂದಾದರೂ ಮರಿಯನ್ನು ಹೊತ್ತೊಯ್ಯುತ್ತದೆ. ಸುಮ್ಮನೆ ಗೂಡಿನಲ್ಲಿ ಇರಬಾರದಾ? ಮೊಮ್ಮೊಗು ಪ್ರಶ್ನೆ ಮಾಡಿತು.

ಆಗ ಅಜ್ಜಿ, ನೋಡು ಮಗಾ, ಹಿಂದೆ ಕೋಳಿ, ಹದ್ದು ಎಲ್ಲಾ ತುಂಬಾ ಒಳ್ಳೆಯ ಗೆಳೆಯರಾಗಿದ್ದರು. ಹದ್ದಿನ ಮನೆಗೆ ಕೋಳಿ, ಕೋಳಿ ಮನೆಗೆ ಹದ್ದು ಎಲ್ಲಾ ಹೋಗಿ ಬಂದು ಮಾಡುತ್ತಿದ್ದವು. ಹೀಗೆ, ಒಂದು ದಿನ ಹದ್ದು ಕೋಳಿಯ ಮನೆಗೆ ಬಂದಿತ್ತು. ಕೋಳಿಯ ಮಕ್ಕಳು ಆಟವಾಡುತ್ತಾ, ಹದ್ದಿನ ಮನೆಯ ಬೀಗದ ಎಸಳನ್ನು ಕಳೆದುಬಿಟ್ಟವು. ಕೋಳಿ ತನ್ನ ಮರಿಯೊಂದಿಗೆ ಎಷ್ಟು ಹುಡುಕಿದರೂ ಸಿಗಲಿಲ್ಲ. ಅದರಿಂದ ಹದ್ದು ಮತ್ತೆ ತನ್ನ ಮನೆಗೆ ಹೋಗಲಾಗಲಿಲ್ಲ. ಆಗ ಹದ್ದು , 'ಗೆಳೆಯಾ ಕೋಳಿ, ನನ್ನನ್ನು ಕ್ಷಮಿಸಿಬಿಡು. ನನ್ನ ಮನೆಯ ಬೀಗದ ಎಸಳು ಸಿಕ್ಕು ನಾನು ಮತ್ತೆ ಮನೆಗೆ ಹೋಗುವವರೆಗೂ ನಾನು ಊರಾಚೆ ಮರದ ಮೇಲೆಯೇ ಇರುತ್ತೇನೆ. ನನಗೆ ಹಸಿವಾದಾಗಲೆಲ್ಲಾ ಬಂದು ನಿನ್ನ ಮರಿಯೊಂದನ್ನು ಹಿಡಿದು ತಿನ್ನುತ್ತೇನೆ. ಆದ್ದರಿಂದ ನೀವು ಆದಷ್ಟು ಬೇಗ ನನ್ನ ಮನೆಯ ಬೀಗದ ಎಸಳನ್ನು ಹುಡುಕಿಕೊಡಿ' ಎಂದು ಒಂದು ಮರಿಯನ್ನು ಎತ್ತಿಕೊಂಡು ಹೋಯಿತು. ಎಂದು ಕಥೆ ಹೇಳಿ ನಿಲ್ಲಿಸಿದಳು.

ಮೊಮ್ಮಗು, 'ಮುಂದೇನಾಯಿತು ಹೇಳಜ್ಜಿ' ಎಂದಿತು. ಅಜ್ಜಿ 'ಮುಂದೇನಾಯಿತು? ಅಂದಿನಿಂದ ಕೋಳಿ ತನ್ನ ಮಕ್ಕಳನ್ನು ಕಟ್ಟಿಕೊಂಡು, ತಿಪ್ಪೆ ಕೆದರುತ್ತಾ ಬೀಗದ ಎಸಳನ್ನು ಹುಡುಕುತ್ತಲೇ ಇದೆ! ಹದ್ದು ಹಸಿವಾದಾಗ ಬಂದು ಒಂದೊಂದು ಕೋಳಿ ಮರಿಯನ್ನು ಹೊತ್ತುಕೊಂಡು ಹೋಗುತ್ತಲೇ ಇದೆ! ಏನುಮಾಡೋಣ ಹೇಳು?' ಎಂದಳು. ಹದ್ದಿನ ಮನೆ, ಆ ಮನೆಯ ಬೀಗ, ಆ ಬೀಗದ ಎಸಳು ಹೇಗಿದ್ದಿರಬಹುದೆಂದು ಮೊಮ್ಮೊಗು ಯೋಚಿಸಲಾರಂಭಿಸಿತು!

*